MVC No.16/2023
PW-01

ದಿನಾಂಕಃ 11-03-2026.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ 1 ನೇ ಎದುರುದಾರರ ಪರ ಶ್ರೀ SND ಮಾನ್ಯ ವಕೀಲರಿಂದ:**

**4.** ಸದರಿ ಅಪಘಾತವಾದ ನಂತರ ನನಗೆ ಶಹಾಪೂರಿನ ಗುಲಗುಂದಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ಸದರಿ ಆಸ್ಪತ್ರೆಯಿಂದ ಮಾರನೇ ದಿನ ಶಹಾಪೂರಿನ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಹೋಗಿದ್ದು ಅಲ್ಲಿನ ವೈದ್ಯರು ನನಗೆ ಕಲಬುರಗಿ ಆಸ್ಪತ್ರೆಗೆ ಹೋಗಲು ಬರೆದಿರುತ್ತಾರೆ. ನಾನು ಕಲಬುರಗಿಯ ಆಸ್ಪತ್ರೆಯಲ್ಲಿ ಸುಮಾರು 15 ದಿಗಳವರೆಗೆ ಒಳರೋಗಿಯಾಗಿ ದಾಖಲಾಗಿರುತ್ತೇನೆ. ಸದರಿ ಅಪಘಾತವಾದ ಮಾರನೇ ದಿನವೇ ನಾನು ಪೊಲೀಸ್ ಠಾಣೆಗೆ ದೂರನ್ನು ಕೊಡಲು ಹೋಗಿರುತ್ತೇನೆ. ಸದರಿ ಪೊಲೀಸ್ ಠಾಣೆಯಲ್ಲಿ ನಾನು ಹೇಳಿರುವಂತೆ ಪೋಲಿಸರು ಬರೆದುಕೊಂಡಿರುತ್ತಾರೆ. ಶಹಾಪೂರಿನ ಸರ್ಕಾರಿ ಆಸ್ಪತ್ರೆಯವರು MLC ಮಾಡಿಕೊಂಡಿರುವುದಿಲ್ಲ ಹಾಗೂ ಕಲಬುರಗಿಯ ಜಯದೇವ ಆಸ್ಪತ್ರೆಯವರು MLC ಮಾಡಿರುತ್ತಾರೆ. ಸದರಿ MLC ವರದಿಯನ್ನು ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ.

5. ನಾನು ಕೂಲಿ ಕೆಲಸವನ್ನು ಮಾಡಿಕೊಂಡಿರುತ್ತೇನೆ. ನಾನು ರೆಡ್ಡಿ ಹೊಟೇಲಿನಲ್ಲಿ ಕೆಲಸವನ್ನು ಮಾಡಿಕೊಂಡಿರುತ್ತೇನೆ. ಸದರಿ ಕೆಲಸ ದಿಂದ ನನಗ ಪ್ರತಿನಿತ್ಯ ರೂ.300/- ಆದಾಯವಿತ್ತು. ನಾನು ಮದ್ಯಾಹ್ನ 12.00 ಗಂಟೆಯಿಂದ ಶಿರವಾಳದ ಗೌಡರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದು ಅವರು ನನಗೆ ಪ್ರತಿ ತಿಂಗಳು ರೂ.6,000/- ಸಂಬಳ ಕೊಡುತ್ತಿದ್ದರು. ನಾನು ನನ್ನ ಅರ್ಜಿಯಲ್ಲಿ ಸದರಿ ರೆಡ್ಡಿ ಹೊಟೇಲಿನಲ್ಲಿ ಹಾಗೂ ಚೆನ್ನಪ್ಪಗೌಡ ಇವರ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಬರೆಸಿರುವುದಿಲ್ಲ. 1 ನೇ

ಎದುರುದಾರರ ತಪ್ಪಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ತಲೆ ಸುತ್ತು ಬಂದು ರಸ್ತೆ ಮೇಲೆ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ಸುಳ್ಳಾದ ಅರ್ಜಿಯನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.